ಕರ್ನಾಟಕ ವಿಧಾನ ಸಭೆ
KARNATAKA LEGISLATIVE ASSEMBLY

ಮಂಗಳವಾರ 27ನೇ ಫೆಬ್ರವರಿ 1996ರಂದು

ಸದನವು ವಿಧಾನ ಸೌಧದಲ್ಲಿರುವ ವಿಧಾನಸಭೆಯ ಸಭಾಂಗಣದಲ್ಲಿ

ಬೆಳಿಗ್ಗೆ 10.00 ಗಂಟೆಗ ಸಮಾವೇಶಗೊಂಡಿತು.

ಅಧ್ಯಕ್ಷರು : (**ಶ್ರೀ ರಮೇಶ ಕುಮಾರ್**) ಅವರು ಪೀಠವನ್ನು ಅಲಂಕರಿಸಿದ್ದರು.

ಸಂತಾಪ ಸೂಚನೆ

ಅಧ್ಯಕ್ಷರು : ವಿಧಾನ ಸಭೆಯ ಮಾಜಿ ಸದಸ್ಯರಾಗಿದ್ದ ಶ್ರೀ ಗೂಡೂ ಸಾಹೇಬ್ ಅವರು ದಿನಾಂಕ 26.02.1996ರಂದು ನಿಧನರಾದುದನ್ನು ವಿಷಾದದಿಂದ ಸಭೆಗೆ ತಿಳಿಸುತ್ತಿದ್ದೇನೆ.

ಶ್ರೀಯುತರು ಆರನೆಯ ವಿಧಾನ ಸಭೆಗ ಬಳ್ಳಾರಿ ಜಿಲ್ಲೆಯ ಹೊಸಪೇಟೆ ಕ್ಷೇತ್ರವನ್ನು ಪ್ರತಿನಿಧಿಸಿದ್ದರು. ಹೊಸಪೇಟೆ ಸಹಕಾರಿ ಬ್ಯಾಂಕಿನ ನಿರ್ದೇಶಕರಾಗಿ, ಪುರಸಭಾ ಅಧ್ಯಕ್ಷರಾಗಿ ಹಾಗೂ ಹಲವಾರು ಸಂಘ ಸಂಸ್ಥೆಗಳ ಪದಾಧಿಕಾರಿಯಾಗಿ ಸಕ್ರೀಯವಾಗಿ ಸೇವ ಸಲ್ಲಿಸಿದ್ದರು.

ಮೃತರ ಗೌರವಾರ್ಥ ಮಾನ್ಯ ಸದಸ್ಯರು ಎದ್ದು ನಿಂತು ಒಂದು ನಿಮಿಷ ಮೌನ ಆಚರಿಸಬೇಕೆಂದು ಕೋರುತ್ತೇನೆ.

(ಮಾನ್ಯ ಸದಸ್ಯರೆಲ್ಲರೂ ಎದ್ದು ನಿಂತು ಒಂದು ನಿಮಿಷ ಮೌನ ಆಚರಿಸಿದರು)

ಈ ಸದನ ಅಂಗೀಕರಿಸಿದ ಸಂತಾಪ ಸೂಚನಾ ನಿರ್ಣಯವನ್ನು ಮೃತರ ಕುಟುಂಬ ವರ್ಗಕ್ಕೆ ಕಳುಹಿಸಿಕೊಡಲಾಗುವುದು.

ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು

ಬೆಂಗಳೂರು ನಗರಕ್ಕೆ ಕಾವೇರಿ ನಾಲ್ಕನೆ ಹಂತದ ನೀರು ಸರಬರಾಜು ಯೋಜನೆ

347 - ಶ್ರೀ ರಾಮಲಿಂಗಾರೆಡ್ಡಿ (ಜಯನಗರ), ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಬೆಂಗಳೂರು ನಗರಕ್ಕೆ ನೀರು ಒದಗಿಸಲು ಕಾವೇರಿ ನಾಲ್ಕನೇ ಯೋಜನೆಯನ್ನು ಕೈಗೆತ್ತಿಕೊಳ್ಳಲಾಗಿದೆಯೇ ?

ಅ) ಹಾಗಿದ್ದಲ್ಲಿ ಈ ಯೋಜನೆಯನ್ನು ಜಪಾನಿನ ಹಣಕಾಸಿನ ನೆರವಿನಿಂದ ತೆಗೆದುಕೊಳ್ಳಲಾಗಿದೆಯೇ?

ಇ) ಮೇಲಿನ ಯೋಜನೆಯನ್ನು ಯಾವಾಗ ಪೂರ್ಣಗೊಳಿಸಲಾಗುವುದು?

ಈ) ಈ ಯೋಜನೆಗೆ ಕರ್ನಾಟಕ ಸರ್ಕಾರದಿಂದ ವೆಚ್ಚ ಮಾಡಲಿರುವ ಹಣವೆಷ್ಟು?

ಉ) ಈ ಯೋಜನೆಯು ಯಾವ ಪ್ರಗತಿಯಲ್ಲಿದೆ?

ಊ) ಈ ಯೋಜನೆಯಿಂದ ಬೆಂಗಳೂರು ನಗರಕ್ಕೆ ಬರಲಿರುವ ನೀರಿನ ಪ್ರಮಾಣ ಎಷ್ಟು?

ಋ) ಈ ಯೋಜನೆಯಿಂದ ತರುವ ನೀರನ್ನು ನಗರದಲ್ಲಿ ಯೋಜಿಸಿರುವ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಸರಬರಾಜು ಮಾಡಲು ಸಾಧ್ಯವೇ?

ೠ) ಈ ಯೋಜನೆಯ ಜೊತೆಗೆ ಬೆಂಗಳೂರು ನಗರಕ್ಕೆ ನೀರನ್ನು ಒದಗಿಸಲು ಬೇರೆ ಯಾವ ಯೋಜನೆಯನ್ನು ಸರ್ಕಾರ ಹಮ್ಮಿಕೊಂಡಿದೆ?

ಶ್ರೀ ಆರ್. ರೋಷನ್‌ಬೇಗ್ (ಬೆಂಗಳೂರು ನಗರಾಭಿವೃದ್ಧಿ ಸಚಿವರು) :

ಅ) ಹೌದು

ಆ) ಹೌದು

ಇ) 2001ನೇ ಇಸವಿಯಲ್ಲಿ ಈ ಯೋಜನೆಯನ್ನು ಪೂರ್ಣ ಮಾಡಲು ಯೋಜಿಸಲಾಗಿದೆ.

ಈ)

1)	ರಾಜ್ಯ ಸರ್ಕಾರ	134-00
2)	ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ	33-50
3)	ಬೆಂಗಳೂರು ಮಹಾನಗರಪಾಲಿಕೆ	33-50
4)	ಬೆಂಗಳೂರು ಜಲಮಂಡಳಿ	67-00
5)	ಒಇಸಿಎಫ್ ಜಪಾನ್	804-00
	ಕೋಟಿ ರೂ.ಗಳು	1072-00

ಉ) ಈ ಯೋಜನೆಗೆ ಬೇಕಾಗ 300 ಎಕರೆ ಭೂಮಿಯನ್ನು ಸ್ವಾದೀನಪಡಿಸಿಕೊಳ್ಳುವ ಕೆಲಸಗಳು ಪ್ರಗತಿಯಲ್ಲಿದೆ.

ಊ) ಈ ಯೋಜನೆಯಿಂದ ಬೆಂಗಳೂರು ನಗರಕ್ಕೆ ದಿನಂಪ್ರತಿ 270 ದಶಲಕ್ಷ ಲೀಟರ್ ನೀರನ್ನು ಅಧಿಕವಾಗಿ ತರಲಾಗುವುದು.

ಋ) ಅಂತರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ನೀರು ಸರಬರಾಜು ಮಾಡುವ ಪ್ರಸ್ತಾವನೆ ಬಗ್ಗೆ ಪರಿಶೀಲನೆ ನಡೆದಿದೆ.

ಖು) ಇಲ್ಲ

ಶ್ರೀ ರಾಮಲಿಂಗಾ ರೆಡ್ಡಿ : ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರು ತಮ್ಮ ಉತ್ತರದಲ್ಲಿ ಕಾವೇರಿ ನಾಲ್ಕನೇ ಹಂತದ ಯೋಜನೆಯು 2001ನೇ ಇಸವಿಯಲ್ಲಿ ಮುಗಿಯುತ್ತದೆ ಎಂದು ತಿಳಿಸಿದ್ದಾರೆ. ಅಂದರೆ ಇನ್ನು 5-6 ವರ್ಷಗಳಲ್ಲಿ ಅದು ಮುಗಿಯಬಹುದು. ಮುಂದಿನ ಆರು ವರ್ಷಗಳಲ್ಲಿ ಬೆಂಗಳೂರಿನ ಜನಸಂಖ್ಯೆಯು ಸಾಕಷ್ಟು ಹೆಚ್ಚಾಗುವ ನಿರೀಕ್ಷೆ ಇದೆ. ಹೀಗಿರುವಾಗ ಕಾವೇರಿ ನಾಲ್ಕನೇ ಹಂತದಲ್ಲಿ ಬರುವ ನೀರು 2001ನೇ ಇಸವಿಯಲ್ಲಿ ಬೆಂಗಳೂರಿನಲ್ಲಿ ಇರತಕ್ಕ ಜನಸಂಖ್ಯೆಗೆ ಸಾಕಾಗುತ್ತದೆಯೇ ಎಂಬುದು ನನ್ನ ಪ್ರಶ್ನೆಯಾಗಿದೆ.

ಶ್ರೀ ಆರ್.ರೋಷನ್ ಬೇಗ್ : ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು 2001ನೇ ಇಸವಿಯಲ್ಲಿ ಬೆಂಗಳೂರಿನಲ್ಲಿ ಇರತಕ್ಕ ಜನಸಂಖ್ಯೆಗೆ ಈ ಯೋಜನೆಯ ನೀರು ಸಾಕಾಗುತ್ತದೆಯೇ? ಎಂದು ಕೇಳಿದ್ದಾರೆ. As on to-day, te water requirement for city of Bangalore is 120 million gallons per day. The cauvery 4th phase, Ist stage will be completed by 2001. Evern then at that time there will be shortage of water in Bangalore City. We need another 60 million gallons of water per day. 2001ನೇ ಇಸವಿಯಲ್ಲಿ ಸ್ಕೀಮ್ ಕಂಪ್ಲೀಟ್ ಆದರೆ ಆದರಿಂದ 60 ಮಿಲಿಯನ್ ಗ್ಯಾಲನ್ನಷ್ಟು ನೀರು ಬೆಂಗಳೂರಿಗೆ ಒದಗಿಸಹುದು. ತಾವು ಹೇಳಿದಂತೆ 2001ನೇ ಇಸವಿಯಲ್ಲಿ ಬೆಂಗಳೂರು ನಗರಕ್ಕೆ ನೀರಿನ ಕೊರತೆ ಇದ್ದೇ ಇರುತ್ತದೆ. ಇದನ್ನು ನಿವಾರಿಸುವ ಸಲುವಾಗಿ ನಾವು ಲೀಕೇಜ್ ಡಿಟೆಕ್ಷನ್ ಸ್ಕೀಮ್ ಎಂದು ಯೋಜನೆಯೊಂದನ್ನು ಇಂಟ್ರಡ್ಯೂಸ್ ಮಾಡುತ್ತಿದ್ದೇವೆ. ಜಗತ್ತಿನ ಎಲ್ಲಾ ನಗರಗಳಲ್ಲೂ ಸುಮಾರಾಗಿ 10-12 ಪರ್ಸೆಂಟ್‌ನಷ್ಟು ಲೀಕೇಜ್ ಇದ್ದೇ ಇರುತ್ತದೆ. Even in Cities like New York, singapore etc. there will be more or less 16% leakage.

ಬೆಂಗಳೂರು ಸಿಟಿಯಲ್ಲಿ ನನ್ನ ಪ್ರಕಾರ ಶೇಕಡ 30ಕ್ಕಿಂತ ಹೆಚ್ಚು ಲೀಕೇಜ್ ಇದೆ. ರಸ್ತೆಗಳಲ್ಲಿ ನೀರು ಲೀಕ್ ಆಗುವುದು ನಮಗೆ ಕಾಣಿಸುವುದಿಲ್ಲ. The Government is in touch with the National Environment Engineering Research Institute. we are consulting them to heip us in the implementation of leakage detectin scheme. By this we can save 30% of water. Apart from this, about 25% water in the city of Bangalore is being utilised for non-domestic purposes such as, Industry, Horticulture, for construction of houses etc.

ಆದ್ದರಿಂದ ಚರಂಡಿ ನೀರನ್ನು ನಾವು ಏಕೆ ರೀಸೈಕಲ್ ಮಾಡಬಾರದು ಎಂದು ಯೋಚಿಸಿ ಇದರಿಂದಾಗಿ ನಾವು ಶೇಕಡ 25ರಷ್ಟಾದರೂ ನೀರನ್ನು ಉಳಿಸಬಹುದು ಎಂದು ಈ ಸ್ಕೀಮ್ ಹಾಕಿಕೊಂಡ್ಡಿದ್ದೇವೆ. ಇದರಿಂದಾಗಿ ಕ್ರಿ.ಶ. 2001ನೇ ಇಸವಿಯ ವೇಳೆಗೆ ಬೆಂಗಳೂರಿನಲ್ಲಿ ನೀರಿಗೆ ಅಷ್ಟೇನು ತೊಂದರೆಯಾಗುವುದಿಲ್ಲ ಎಂದು ನಾನು ಭಾವಿಸುತ್ತೇನೆ.

ಶ್ರೀ ಬಿ. ಬೈರೇಗೌಡ : ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರಾದ ರೋಷನ್ ಬೇಗರವರು ಚರಂಡಿ ನೀರನ್ನು ರೀಸೈಕಲ್ ಮಾಡುವ ಬಗ್ಗೆಹೇಳಿದರು. ವಿಚಾರಕ್ಕೂ ನನ್ನ ಇಲಾಖೆಗೂ ಸಂಬಂಧವಿರುವುದರಿಂದ ಒಂದು ಸಂಸ್ಥೆಗೂ ಮತ್ತು ಕರ್ನಾಟಕ ಸರ್ಕಾರಕ್ಕೂ ಬೆಂಗಳೂರಿನ ಚರಂಡಿ ನೀರನ್ನು ರೀಸೈಕಲ್ ಮಾಡುವುದಕ್ಕೆ ಈಗಾಗಲೇ ಮೆಮೋರೆಂಡಮ್ ಆಫ್ ಅಂಡರ್‌ಸ್ಟ್ಯಾಂಡಿಂಗ್‌ಗೆ ಸಹಿ ಮಾಡಲಾಗಿದೆ. ಬಗ್ಗೆ ಯೋಜನೆಯನ್ನು ತಯಾರು ಮಾಡಲಿಕ್ಕೆ ಈಗಾಗಲೇ ನಾವು ಅವರಿಗೆ ವಹಿಸಿದ್ದೇವೆ. ಹೀಗೆ ಬೆಂಗಳೂರಿನಲ್ಲಿಯ ಚರಂಡಿ ನೀರನ್ನು ರೀಸೈಕಲ್ ಮಾಡುವುದಕ್ಕೆ ಸರ್ಕಾರದವರು ಕ್ರಮ ತೆಗೆದುಕೊಂಡಿದ್ದಾರೆ. ಎಂದು ನಾವು ತಿಳಿಸಲಿಕ್ಕೆ ಇಷ್ಟಪಡುತ್ತೇನೆ.

ಶ್ರೀ ಎ. ಸೋಮಣ್ಣ : ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರು ಲೀಕೇಜ್ ಬಗ್ಗೆ ಈಗ ಹೇಳಿದರು. ಬೆಂಗಳೂರು ನಗರದಲ್ಲಿ ಇವತ್ತಿನ ದಿವಸ ಅನೇಕ ರಸ್ತೆಗಳ ಮಧ್ಯದಲ್ಲಿ ವಾಟರ್ ಪೈಪಗಳನ್ನು ಹಾಕಿರುತ್ತಾರೆ. ರಸ್ತೆಯ ಮೇಲಿನ ಹೆಚ್ಚಿನ ವಾಹನ ಸಂಚಾರ ಅಥವಾ ಇತರ ಒತ್ತಡದಿಂದ ಇವತ್ತು ಬಹುತೇಕ ಲೀಕೇಜ್ ಆಗುತ್ತಿದೆ. ಅದು ನಮ್ಮ ಮಾಗಡಿ ರಸ್ತೆಯಲ್ಲಿ ಇರಬಹುದು, ಮೈಸೂರು ರಸ್ತೆಯಲ್ಲಿ ಇರಬಹುದು ಅಥವಾ ಬನ್ನೇರು ಘಟ್ಟದ ರಸ್ತೆಯಲ್ಲಿ ಇರಬಹುದು ಅಥವಾ ಬೇರೆಬೇರೆ ಕಡೆಗಳಲ್ಲಿರುವಂತಹ ತರ ರಸ್ತೆಗಳಲ್ಲಿರಬಹುದು. ಅದನ್ನು ಬದಲಾವಣೆ ಮಾಡಿ ಎಂದು ನಾವು ಸುಮಾರು ದಿವಸಗಳಿಂದ ಹೇಳಿಕೊಂಡು ಬಂದಿದ್ದರೂ, ಆ ಬಗ್ಗೆ ಇವತ್ತಿನವರೆಗೂ ಕ್ರಮ ತೆಗೆದುಕೊಂಡಿಲ್ಲ. ಒಮ್ಮೆ ಲೀಕೇಜ್ ಶುರುವಾಯಿತು ಎಂದರೆ, ಅದರಿಂದ ರಸ್ತೆಗಳೂ ಕೂಡ ಹಾಳಾಗುತ್ತವೆ. ಆದ್ದರಿಂದ ನಾನು ಮಾನ್ಯ ಅಧ್ಯಕ್ಷರ ಮೂಲಕ ಮಾನ್ಯ ಸಚಿವರಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ, ಯಾವ ಯಾವ ರಸ್ತೆಗಳಲ್ಲಿ ವಾಹನ ಸಂಚಾರ ಜಾಸ್ತಿ ಇದೆಯೋ ಅಲ್ಲಿ ವಾಟರ್ ಲೀಕೇಜ್ ಆಗುವುದನ್ನು ತಪ್ಪಿಸಲು ತಕ್ಷಣ ಕ್ರಮ ಕೈಗೊಳ್ಳಬೇಕು. ಇದರಿಂದಾಗಿ ನಾವು ಸೇಕಡ 15 ರಷ್ಟು ನೀರನ್ನಾದರೂ ಉಳಿಸಬಹುದು.

ಅಧ್ಯಕ್ಷರು : ಇದು ಪ್ರಶ್ನೋತ್ತರದ ಅವಧಿ ಎಂದು ಮಾನ್ಯ ಸಚಿವರು ನೆನಪಿನಲ್ಲಿಟ್ಟುಕೊಳ್ಳಬೇಕು.

ಶ್ರೀ ಎ. ಸೋಮಣ್ಣ : ಮಾನ್ಯ ಅಧ್ಯಕ್ಷರೇ, ಬಿನ್ನಿಪೇಟೆಗೆ ನೀರು ಬರುತ್ತದೆ ಎಂದು ಹೇಳುತ್ತಾರೆ. ಅಲ್ಲಿ ನೀರಿಗೆ ಬಹಳ ತೊಂದರೆ ಇದೆ. ತಾವು ಈ ಬಗ್ಗೆ ತಾವು ಯಾರಿಂದಲಾದರೂ ಪೊಲೀಸ್ ಮೆಸೇಜ್ ಕರಿಸಿಕೊಳ್ಳಿ. ನೀರಿನ ಬಗ್ಗೆ ಕೂಗಾಟ ಆಗಿದೆ. ಬಿನ್ನಿಪೇಟೆ ಬಡವರ ಕ್ಷೇತ್ರ. ಅಲ್ಲಿ ನೀರಿಲ್ಲ.

ಅಧ್ಯಕ್ಷರು : ನಾನು ತಮಗೆ ಮುಂದಕ್ಕೆ ಮಾತನಾಡುವುದಕ್ಕೆ ಅವಕಾಶ ಕೊಡುವುದಿಲ್ಲ. ತಾವು ಪ್ರಸ್ತಾಪಿಸಿರುವ ವಿಷಯವನ್ನು ನಂತರ ಚರ್ಚೆಗೆ ತೆಗೆದುಕೊಳ್ಳೋಣ. ಮಾನ್ಯ ಸದಸ್ಯರು ದಯವಿಟ್ಟು ಸಹಕರಿಸಬೇಕು.

ಶ್ರೀ ಎಸ್. ಸುರೇಶ್ ಕುಮಾರ್ : ಮಾನ್ಯ ಅಧ್ಯಕ್ಷರೇ, ಕಾವೇರಿ ನಾಲ್ಕನೇ ಹಂತದ ಯೋಜನೆಯಲ್ಲಿ ನೀರನ್ನು ಪಂಪ್ ಮಾಡುವುದಕ್ಕಾಗಿ ಬೇಕಾಗುವ ಎಲೆಕ್ಟ್ರಿಸಿಟಿಯನ್ನು ಜನರೇಟ್ ಮಾಡುವುದಕ್ಕೆ ಏನಾದರೂ ಪರ್ಯಾಯ ವ್ಯವಸ್ಥೆ ಈ ಯೋಜನೆಯಲ್ಲಿ ಅಡಕವಾಗಿದೆಯೇ? ಎರಡನೆಯದಾಗಿ ಕಾವೇರಿ ಐದನೇ ಹಂತದ ಯೋಜನೆಯನ್ನು ಕೈಗೆತ್ತಿಕೊಳ್ಳಲು ಬ್ಲೂಪ್ರಿಂಟ್

ಏನಾದರೂ ತಾವು ತಯಾರು ಮಾಡಿದ್ದೀರೋ ಎಂಬುದನ್ನು ಮಾನ್ಯ ಸಚಿವರು ದಯವಿಟ್ಟು ತಿಳಿಸಬೇಕು.

Sri R. ROSHAN BHAIG : After implementation of the leakage detection scheme, most of the problems will be solved. There will not be water-logging on the roads. ಆಮೇಲೆ ಮಾನ್ಯ ಸದಸ್ಯರಾದ ಸುರೇಶಕುಮಾರ್‌ರವರು ಕಾವೇರಿ 5ನೇ ಸ್ಟೇಜಿನ ಬ್ಲೂ ಪ್ರಿಂಟ್ ತಯಾರು ಆಗಿದೆಯೇ? ಎಂದು ಕೇಳಿದ್ದಾರೆ. ನಾವೀಗ ಫಸ್ಟ ಫೇಸ್ನಲ್ಲಿದ್ದೇವೆ. ಇದಾದ ಮೇಲೆ ಸೆಕೆಂಡ್ ಫೇಸ್ ಆಗುತ್ತದೆ. ಐದನೇ ಸ್ಟೇಜಿನ ಯೋಜನೆ ಬಗ್ಗೆ ನಾವಿನ್ನೂ ಯೋಜನೆ ಮಾಡಿಲ್ಲ. We are in constant touch with the KEB.

MR. SPEAKER : the hon.Member is asking as to whether required power generation an integral part of your plan?

ಶ್ರೀ ಆರ್. ರೋಷನ್ ಬೇಗ್ : ಈ ಹಂತದ ಕಾವೇರಿ ಯೋಜನೆಯಡಿ ತಿಪ್ಪಗೊಂಡನಹಳ್ಳಿ ಜಲಾಶಯಕ್ಕೆ ಏನು ನೀರು ಬರುತ್ತದೆ, ಅಲ್ಲಿ ಸತತ ವಿದ್ಯುತ್ ಪೂರೈಕೆಯ ಸಲುವಾಗಿ ಒಂದು ಜನರೇಟರ್ ಸೆಟ್ ಮಾಡುತ್ತಿದ್ದೇವೆ. ವಿದ್ಯುತ್ ಇಲ್ಲದೇ ಪಂಪಿಂಗ್ ಕೆಲಸಕ್ಕೆ ತೊಂದರೆಯಾಗಬಾರದೆಂದು ಈ ಸ್ಕೀಮ್ ಮಾಡುತ್ತಿದ್ದೇವೆ.

ಅಧ್ಯಕ್ಷರು : ಮಾನ್ಯ ಖಿರ್ಗಿಯವರೇ, ತಮ್ಮ ಪ್ರಶ್ನೆ ಸಂಖ್ಯೆ 62(789)ನ್ನು ಉತ್ತರಿಸಲು ಮಾನ್ಯಮಂತ್ರಿಗಳು ಸ್ವಲ್ಪ ಸಮಯ ಕೇಳಿದ್ದಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖಿರ್ಗಿ : ಅಧ್ಯಕರೇ, ಈ ಪ್ರಶ್ನೆಗೆ ಯಾವಾಗ ಉತ್ತರಬರುತ್ತದೆಯೋ? ಗೊತ್ತಿಲ್ಲ. ತಮಗೆ ಗೊತ್ತಿರುವಂತೆ ಈ ಅಧಿವೇಶನ ಬರುವ6ನೇ ತಾರೀಖಿನಂದೇ ಮುಕ್ತಾಯವಾಗುತ್ತಿದೆ. ಹೀಗಿರುವಾಗ ಈ ಪ್ರಶ್ನೆಗೆ ಯಾವಾಗ ಉತ್ತರ ಬರುತ್ತದೆಯೋ?

ಅಧ್ಯಕ್ಷರು : ಮತ್ತೆ ಸದನ ಸೇರುತ್ತದಲ್ಲ.

ಶ್ರೀ ಎಂ. ಮಲ್ಲಿಕಾರ್ಜುನಖಿರ್ಗಿ : ಮಾನ್ಯ ಅಧ್ಯಕ್ಷರೇ, ನಾವೇನೋ ಮತ್ತೆ ಸದನದಲ್ಲಿ ಸೇರಬಹುದು. ಆದರೆ ಅಲ್ಲಿ ಕೆರೆಗಳಲ್ಲಿ ನೀರು ನಿಲ್ಲಬೇಕಲ್ಲ.

ಅಧ್ಯಕ್ಷರು : ಮಳೆಗಾಲ ಶುರುವಾಗುವುದಕ್ಕೆ ಮುಂಚೆಯೇ ಸದನ ಸೇರುತ್ತದೆ.

ಶ್ರೀ ಎಂ. ಮಲ್ಲಿಕಾರ್ಜುನ ಖಿರ್ಗಿ:- ಅಲ್ಲಿ ಸುಮಾರು 8-10 ಕೆರೆಗಳು ಒಡೆದು ಹೋಗಿವೆ. ಅವುಗಳನ್ನು ರಿಪೇರಿ ಮಾಡಿಸಬೇಕು.

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ : ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಕೇಳಿರುವ ಪ್ರಶ್ನೆಗೆ ಸಂಪೂರ್ಣವಾದ ಮಾಹಿತಿ ಬಂದಿಲ್ಲ. ಇನ್ನು ಒಂದೆರಡು ದಿವಸಗಳಲ್ಲಿ ಒಡೆದು ಹೋಗಿರತಕ್ಕ ಕೆರೆಗಳಿಗೆ ಏನೇನು ಚಿಕಿತ್ಸೆ ಮಾಡಿದ್ದೇವೆ ಎಂಬುದನ್ನು ಅವರಿಗೆ ತಿಳಿಸುತ್ತೇವೆ.

ಅಧ್ಯಕ್ಷರು : ಆಗಬಹುದೇ ಮಾನ್ಯ ಖರ್ಗೆಯವರೇ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನನಗೇನೂ ಅವರ ಉತ್ತರ ಬೇಕಾಗಿಲ್ಲ. ನನಗೆ ಕೆರೆಗಳನ್ನು ದುರಸ್ತಿ ಮಾಡಿಸಿ ಕೊಟ್ಟರೆ ಸಾಕಾಗುತ್ತದೆ. ಅವರು ಬೇಕಾದರೆ ಆಸಕ್ತಿ ವಹಿಸಿ ಮಾಡಿಸಲಿ.

ಅಧ್ಯಕ್ಷರು : ನಾವು ಚಿಕಿತ್ಸೆ ಮಾಡುತ್ತೇವೆ ಎಂದು ಅವರು ಹೇಳಿದ್ದಾರಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನಾನು ಅವರಿಗೆ ಮನವಿ ಮಾಡಿಕೊಳ್ಳುವುದೇನೆದರೆ, ಅವರು ದಯಮಾಡಿ ದೆಹಲಿಗೆ ಹೋಗುವ ಮುಂಚೆ ಈ ಕೆಲಸವನ್ನು ನಮಗೆ ಮಾಡಿಕೊಡಲಿ ಎಂದು ಕಳಕಳಿಯಿಂದ ಕೇಳಿಕೊಳ್ಳುತ್ತೇನೆ.

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ : ನಾನು ಮಾನ್ಯ ಸದಸ್ಯರಿಗೆ ಭರವಸೆ ಕೊಡಬಯಸುತ್ತೇನೆ. ನಾನು ರಾಜ್ಯದಲ್ಲಿರತಕ್ಕ ಎಲ್ಲಾ ಕೆರೆಗಳನ್ನು ರಿಪೇರಿ ಮಾಡಿಸಿ, ಅದರ ಬಗ್ಗೆ ಒಂದು ವರದಿ ಕೊಟ್ಟೇ ದೆಹಲಿಗೆ ಹೋಗುತ್ತೇನೆ.

ಅಧ್ಯಕ್ಷರು : ಆಯಿತು ಬಿಡಿ.

ಅಂಗನವಾಡಿಗಳನ್ನು ತೆರೆಯಲು ಆಳವಡಿಸಿರುವ ಸೂತ್ರಗಳು

63 - ಡಾ. ಎಂ.ಪಿ. ಕರ್ಕಿ (ಕುಮಟ) : ಮಾನ್ಯ ಸಣ್ಣ ನೀರಾವರಿ ಮತ್ತು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಅಂಗನವಾಡಿಗಳನ್ನು ಪ್ರಾರಂಭಿಸಲು ಆಳವಡಿಸಿರುವ ಸೂರ್ತಗಳಾವುವು, (ಜನ ಸಂಖ್ಯೆಯೆ; ಜನಸಾಂದ್ರತೆಯೆ. ಕ್ಷೇತ್ರ ವಿಸ್ತಾರವೇ),*

ಆ) *ಮಲೆನಾಡಿನ ಪ್ರದೇಶಗಳಲ್ಲಿ ಈ ಸೂತ್ರ ಸಡಿಲಿಸಿ ಹೆಚ್ಚು ಅಂಗನವಾಡಿಗಳನ್ನು ತೆರೆಯಲು ಅವಕಾಶ ಕಲ್ಪಿಸಲಾಗುವುದು?*

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ (ಸಣ್ಣ ನೀರಾವರಿ ಮತ್ತು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ರಾಜ್ಯ ಸಚಿವರು)

ಅ) ಕೇಂದ್ರ ಸರ್ಕಾರದ ಸೂಚನೆಯಂತೆ ಐಸಿಡಿಎಸ್ ಯೋಜನೆ ಪ್ರಾರಂಭ ಮಾಡಲು ಗುಡ್ಡಗಾಡು ಜನರು ಅಥವಾ ಹರಿಜನರು ಹೆಚ್ಚಾಗಿ ವಾಸಿಸುವ ಪ್ರದೇಶಗಳು, ಆರ್ಥಿಕವಾಗಿ ಹಿಂದುಳಿದ ಪ್ರದೇಶಗಳು, ಕ್ಷಾಮ ಪೀಡಿತ ಪ್ರದೇಶಗಳು ಮತ್ತು ಅಪೌಷ್ಟಕತೆ ಹೆಚ್ಚಾಗಿ ಇರುವ ಮತ್ತು ಸಮಾಜ ಸೇವಾ ಅಭಿವೃದ್ಧಿಯಲ್ಲಿ ಹಿಂದುಳಿದ ತಾಲ್ಲೂಕುಗಳಿಗೆ ಆದ್ಯತೆ ನೀಡಿ ಆಯ್ಕೆ ಮಾಡಲಾಗುತ್ತದೆ. ಇಂತಹ ಪ್ರದೇಶಗಳಲ್ಲಿ ಪ್ರತಿ ಸಾವಿರ ಜನಸಂಖ್ಯೆಗೆ ಒಂದು ಅಂಗನವಾಡಿಯನ್ನು ತೆರೆಯಲಾಗುತ್ತದೆ.

ಆ) ಗುಡ್ಡಗಾಡು ಮತ್ತು ಮರಳುಗಾಡು ಪ್ರದೇಶಗಳಲ್ಲಿ ಜನಸಂಖ್ಯೆ ವಿರಳವಾಗಿರುವುದರಿಂದ ಹಳ್ಳಿಗಳು ಸಣ್ಣದಾಗಿರುತ್ತವೆ. ಕೇಂದ್ರ ಸರ್ಕಾರದ ಸೂಚನೆಯಂತೆ ಇಂತಹ ಪ್ರದೇಶಗಳಲ್ಲಿ300ಅಥವಾ ಜಾಸ್ತಿ ಜನಸಂಖ್ಯೆ ಇರುವ ಪ್ರತಿಯೊಂದು ಸಣ್ಣ ಹಳ್ಳಿಗಳಲ್ಲಿ, ಹ್ಯಾಮ್ಲೆಟ್‌ಗಳಲ್ಲಿ ಅಂಗನವಾಡಿಗಳನ್ನು